ಅನೇಕ ಬಣ್ಣ, ರುಚಿ ಅನುಭವಗಳನ್ನೆಲ್ಲಾ ಮನುಷ್ಯನಿಗೆ ತಿಳಿಯದ ಭಾಷೆಗಳಲ್ಲಿ ನೀಡುತ್ತಿವೆಯೆಂದು ಪ್ರೇಮಚಂದ್ರನಿಗೆ ಅನ್ನಿಸಿತ್ತು.

''ಅದೆಲ್ಲವೂ ಒಪ್ಪಿದೆ. ಆದರೆ, ಮಗ ಒಬ್ಬ ಕ್ರೈಸ್ತ ಹುಡುಗಿಯನ್ನು ಕಟ್ಟಿಕೊಂಡಿದ್ದಾನೆಂದು ತಿಳಿದಾಗ ತನ್ನ ಅಪ್ಪನ ರೀತಿ ನೀತಿಯೇ ಬದಲಾಗುತ್ತದೆ. ಈ ಫಿಲಾಸಫಿಗಳೆಲ್ಲಾ ಕಂಬಿಕೀಳುತ್ತವೆ. ಮನೆಗೆ ಸೇರಿಸೋಲ್ಲ ಮಗಾ, ಎಚ್ಚರ" ತರೇಸಾಳನ್ನು ರಿಜಿಸ್ಟರ್ ಮದುವೆಯಾದ ಅನಂತರ ನಡೆದ ಗ್ರಾಂಡ್ ಹೋಟೆಲ್‌ನ ಅತಿಥಿ ಸತ್ಕಾರದ ನಡುವೆ ಅವಳು ಪ್ರೇಮನಿಗೆ ಹೇಳಿದ್ದಳು.

ಎಲ್ಲದಕ್ಕೂ ಸಿದ್ಧನಾಗಿಯೇ ಪ್ರೇಮಚಂದ್ರ, ತರೇಸಾಳನ್ನು ಕರೆದುಕೊಂಡು ಮನೆಗೆ ಬಂದಿದ್ದ. ಮದುವೆಯ ವಿಚಾರ ಅಪ್ಪನಿಗೆ ತಿಳಿಸದೇ ಇದ್ದುದರ ತಪ್ಪಿತಸ್ಥ ಮನೋಭಾವ ಅವನನ್ನು ಕಾಡುತ್ತಲೇ ಇತ್ತು. ಬೇಲಿಯ ಮೇಲೆ ಹಾಗಲಕಾಯಿ ಬಳ್ಳಿಗಳು ಹಬ್ಬಿ ನಿಂತಿದ್ದವು. ಅದರಲ್ಲಿ ಬಲಿತ ಕಾಯಿಗಳು ಸಮೃದ್ಧವಾಗಿ ತೂಗಾಡುತ್ತಿದ್ದವು.

"ಇವಳು ತರೇಸಾ" ಪ್ರೇಮಚಂದ್ರ ಅಳುಕುತ್ತಲೇ ಅಪ್ಪನ ಕಾಲಿಗೆ ಬಿದ್ದು, "ಅಪ್ಪ, ನನ್ನನ್ನು ಕ್ಷಮಿಸು" ಎಂದ. ಅದಕ್ಕೆ ಉತ್ತರವಾಗಿ ಅಂಗಳದಲ್ಲಿರುವ ಪೇರಳೆ ಮರದತ್ತ ಬೊಟ್ಟು ಮಾಡಿ ತೋರಿಸಿದರು. ಅದರ ತೆಳುವಾದ ರೆಂಬೆಯಲ್ಲಿ ವಿವಿಧ ಬಣ್ಣಗಳ ಗರಿಗಳಿರುವ ಎರಡು ಹಕ್ಕಿಗಳು ಒಂದು ಹಣ್ಣನ್ನು ಮೌನವಾಗಿ ಪಾಲು ಮಾಡಿ ತಿನ್ನುತ್ತಿರುವುದನ್ನು ಪ್ರೇಮಚಂದ್ರ ಕಂಡ. ತುಟಿಗಳ ನಡುವಿನಿಂದ ಬೀಡಿಯನ್ನು ತೆಗೆಯದೆ ಅಪ್ಪ ತುಂಬಾ ಹೊತ್ತು ತರೇಸಾಳೊಂದಿಗೆ ಮಾತನಾಡಿದರು. ಅಡಿಗೆಮನೆಯಲ್ಲಿ ಅವಳು ತಯಾರಿಸಿದ ಚಹ ಕುಡಿದಿದ್ದರು.

ಹೆಮಿಂಗ್ವೇ ಎಂಬ ಖ್ಯಾತ ಇಂಗ್ಲಿಷ್ ಲೇಖಕ ನಿರಂತರವಾಗಿ ತಂಬಾಕು ಸೇವಿಸಿದ್ದರಿಂದ ವಾಸನೆಗಳನ್ನು ಗುರುತಿಸುವ ಸಾಮರ್ಥ್ಯವನ್ನೇ ಕಳೆದುಕೊಂಡಿದ್ದ. ತಕ್ಷಣ ಆತ ತಂಬಾಕು ಸೇವನೆಯ ಅಭ್ಯಾಸವನ್ನೇ ನಿಲ್ಲಿಸಿ ಬಿಟ್ಟಿದ್ದ. ಒಂದು ದಿನ ಇದ್ದಕ್ಕಿದ್ದಂತೆ ಅವನು ಕಳೆದುಕೊಂಡಿದ್ದ ಗ್ರಹಣ ಶಕ್ತಿಯನ್ನು ಮರಳಿ ಪಡೆದಿದ್ದ. ಈ ಕತೆಯನ್ನು ತರೇಸಾ ಅಪ್ಪನಿಗೆ ವಿಶದವಾಗಿ ಹೇಳಿದ್ದಳು.

''ಕೆಳಗೆ ತೋಟದಲ್ಲಿ ಒಂದು ಅನಾನಸು ಹಣ್ಣಾಗಿದೆ. ಬೀಸುವ ಗಾಳಿಯುತ್ತ ಮೂಗನ್ನು ಅರಳಿಸಿ ನೋಡು" ಅಪ್ಪ ಹೇಳಿದ್ದರು.

ತರೇಸ ಸಂಕೋಚದಿಂದ ಪ್ರೇಮಚಂದ್ರನನ್ನು ನೋಡಿದ್ದಳು. ಪ್ರೇಮಚಂದ್ರನಿಗೆ ಅನಾನಸ್ಸಿನ ವಾಸನೆಯ ಅನುಭವವಾಗಿರಲಿಲ್ಲ.

